ಎಸ್ಎಸ್ಎಲ್ಸಿ ಅಂಕಪಟ್ಟಿ ಪರೀಕ್ಷೆ ಮಂಡಳಿಯ ಪರಿಶೀಲನೆಗೆ ಕಳುಹಿಸಿದ್ದು ವರದಿ ಬಂದ ಕೂಡಲೇ ಭರ್ತಿ ಮಾಡಲು ಕ್ರಮ ಜರುಗಿಸಲಾಗುವುದು. ಹಂತ ಹಂತದಲ್ಲಿ ತುಂಬುವ ಪ್ರಯತ್ನ ಮಾಡುತ್ತೇವೆ.

**ಶ್ರೀ ಎಂ.ವೈ. ಪಾಟೀಲ್:** ನನ್ನ ಪ್ರಶ್ನೆ ಏನೆಂದರೆ, ಅಫಜಲಪುರದಲ್ಲಿ ಖಾಲಿ ಇರುವ ಹುದ್ದೆಯನ್ನು ಮೂರು ತಿಂಗಳೊಳಗೆ ಭರ್ತಿ ಮಾಡುತ್ತೀರಾ ಎಂದು ಕೇಳುತ್ತೇನೆ. ಬಹಳಷ್ಟು ಹುದ್ದೆಗಳು ಖಾಲಿ ಇವೆ. 9 ಪಶು ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇವೆ. ಅಸಿಸ್ಟೆಂಟ್ ಡೈರೆಕ್ಟರ್ ಹುದ್ದೆ ಖಾಲಿ ಇದೆ. ಅದಕ್ಕೆ ಮೂರು ತಿಂಗಳೊಳಗೆ ಅದನ್ನು ತುಂಬುತ್ತೀರಾ ಎನ್ನುವುದರ ಬಗ್ಗೆ ನಮಗೆ ಆಶ್ವಾಸನೆ ಕೊಡಿ.

**ಶ್ರೀ ರೇವೂ ನಾಯಕ್ ಬೆಳಮಗಿ:** ಇಡೀ ರಾಜ್ಯದಲ್ಲಿ ಬಹಳಷ್ಟು ಹುದ್ದೆಗಳು ಖಾಲಿ ಇವೆ. ಹಿರಿಯ ಸದಸ್ಯರಾದ ತಾವು ನನ್ನ ಗಮನಕ್ಕೆ ಏನು ತಂದಿದ್ದೀರಿ ಅದನ್ನು ಪರಿಶೀಲನೆ ಮಾಡುತ್ತೇನೆ.

**ಎ.ಎನ್.ಎಂ.ಗಳ ನೇಮಕ**

108(528) ಶ್ರೀ ತಿಮ್ಮರಾಯಪ್ಪ ಕೆ.ಎಂ. ವಿಧಾನಸಭಾ ಸದಸ್ಯರು (ಪಾವಗಡ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾವಗಡ ತಾಲ್ಲೂಕಿನಲ್ಲಿರುವ ಎ.ಎನ್.ಎಂ. ಕೇಂದ್ರಗಳೆಷ್ಟು;

ಆ) ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು;

ಇ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ನಿರ್ಧರಿಸಿದೆಯೇ;

ಈ) ಹಾಗಿದ್ದಲ್ಲಿ, ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಆರ್. ಅಶೋಕ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಪಾವಗಡ ತಾಲ್ಲೂಕಿನಲ್ಲಿ 42 ಎ.ಎನ್.ಎಂ. ಕೇಂದ್ರಗಳಿವೆ.

ಆ) 11 ಉಪ ಕೇಂದ್ರಗಳಲ್ಲಿ ಎ.ಎನ್.ಎಂ.ಗಳ ಹುದ್ದೆಗಳು ಖಾಲಿ ಇರುತ್ತವೆ.

ಇ) ಹೌದು.

ಈ) ಇತ್ತೀಚೆಗೆ 600 ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಮುಗಿದಿದ್ದು, ಇವರಿಗೆ ನೇಮಕಾತಿ ಮಾಡಲಾಗುತ್ತಿದೆ. ಅದರಲ್ಲಿ 4 ಅಭ್ಯರ್ಥಿಗಳನ್ನು ಪಾವಗಡ ತಾಲ್ಲೂಕಿನ ಉಪ ಕೇಂದ್ರಗಳಿಗೆ ನೇಮಿಸಲಾಗಿದೆ. ಇಲಾಖೆಯಲ್ಲಿ ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ತರಬೇತಿ ಪಡೆದ

ಅಭ್ಯರ್ಥಿಗಳು ಸದ್ಯದಲ್ಲಿ ಲಭ್ಯವಿರುವುದಿಲ್ಲ. 2006–07ನೇ ಸಾಲಿನಲ್ಲಿ 19 ತರಬೇತಿ ಕೇಂದ್ರಗಳಲ್ಲಿ 600 ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದು ಈ ಅಭ್ಯರ್ಥಿಗಳು 18 ತಿಂಗಳ ತರಬೇತಿಯನ್ನು ಪೂರ್ಣಗೊಳಿಸಿ ಉತ್ತೀರ್ಣರಾದವರಿಗೆ ನೇಮಕಾತಿ ನಿಯಮಗಳ ಪ್ರಕಾರ ನೇಮಕಾತಿ ಆದೇಶವನ್ನು ಹೊರಡಿಸುವಾಗ ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು.

**ಶ್ರೀ ಕೆ.ಎಂ. ತಿಮ್ಮರಾಯಪ್ಪ:** ಪಾವಗಡ ತಾಲ್ಲೂಕಿನಲ್ಲಿ ಬಹಳ ವರ್ಷಗಳಿಂದ, ಸುಮಾರು ಹುದ್ದೆಗಳು ಖಾಲಿ ಇವೆ. ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರ ಹುದ್ದೆಗಳು ಅನೇಕ ವರ್ಷಗಳಿಂದ ಖಾಲಿ ಇದ್ದು, ಇವರು ನೇಮಕಾತಿ ಮಾಡಿಕೊಳ್ಳುವಂಥ ಸಂದರ್ಭದಲ್ಲಿ, ಹುದ್ದೆಗಳನ್ನು ತುಂಬಿದಾಗ ಅಲ್ಲಿ ಯಾವುದೇ ಅಭ್ಯರ್ಥಿಗಳು ಅಲ್ಲಿಗೆ ಹಾಜರಾಗದೇ, ಯಾವುದೋ ಒಂದು ಪ್ರಬಲ ಒತ್ತಡದಿಂದ ನಮ್ಮ ತಾಲ್ಲೂಕಿಗೆ ಬರತಕ್ಕಂಥವರಿಗೆ ಬದಲಾಯಿಸಿ ಬೇರೆ ಕಡೆಗೆ ಕೊಟ್ಟಿದ್ದಾರೆನ್ನುವ ಮಾಹಿತಿ ಇರುವ ಹಿನ್ನಲೆಯಲ್ಲಿ ಸುಮಾರು ವರ್ಷಗಳಿಂದಲೂ ಸಹ ನನ್ನ ತಾಲ್ಲೂಕಿನಲ್ಲಿರತಕ್ಕಂಥ ಹುದ್ದೆಗಳನ್ನು ತುಂಬದಿರತಕ್ಕಂಥದ್ದು ತುಂಬಾ ಶೋಚನೀಯವಾದ ಸಂಗತಿ. ಅಲ್ಲಿ ಅನೇಕ ಜನ ಮಹಿಳೆಯರು ಸಾರಿಗೆ ವ್ಯವಸ್ಥೆ ಇಲ್ಲದೇ ಅನೇಕ ಸಂಕಷ್ಟಗಳಿಗೆ ಸಿಲುಕಿರುತ್ತಾರೆ. ದುರ್ಬಲವಾದಂಥ ಮಹಿಳೆಯರಿಗೆ ತುಂಬಾ ಅನಾನುಕೂಲವಾಗುತ್ತದೆ. ಕೂಡಲೇ ಸರ್ಕಾರ ಈ ಬಗ್ಗೆ ಚಿಂತನೆ ಮಾಡಿ ಅತೀ ಜರೂರಾಗಿ ಆ ಹುದ್ದೆಗಳನ್ನು ತುಂಬಬೇಕು. ಇವರೇನು ಉತ್ತರ ಕೊಟ್ಟಿದ್ದಾರೆ ಅದರಲ್ಲಿ 600 ಅಭ್ಯರ್ಥಿಗಳಿಗೆ ತರಬೇತಿಯನ್ನು ಕೊಡುತ್ತಿದ್ದು, ತರಬೇತಿಯ ಅವಧಿ 18 ತಿಂಗಳು ಬೇಕೆಂದು ಹೇಳಿದ್ದಾರೆ. ದಯವಿಟ್ಟು 18 ತಿಂಗಳವರೆಗೆ ಕಾಯದೇ ಅತಿ ಜರೂರಾಗಿ ಆ ಭಾಗದಲ್ಲಿರುವ ಮಹಿಳೆಯರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ತಾವು ಯೋಚಿಸಿ ಕೂಡಲೇ ಆ ಹುದ್ದೆಗಳನ್ನು ಬೇರೆ ಎಲ್ಲಿಂದಾದರೂ ತಂದು ತುಂಬಿ ಕೊಡಬೇಕೆಂದು ಈ ಮೂಲಕ ತಮ್ಮನ್ನು ಕೋರುತ್ತೇನೆ.

**ಶ್ರೀ ಆರ್. ಅಶೋಕ್:** ಮಾನ್ಯ ಅಧ್ಯಕ್ಷರೆ, ಪಾವಗಡ ತಾಲ್ಲೂಕಿನಲ್ಲಿ ಎ.ಎನ್.ಎಂ. ಹುದ್ದೆಗಳು ಖಾಲಿ ಇರತಕ್ಕಂಥದ್ದು ನಿಜ. ಇದು ನನ್ನ ಗಮನಕ್ಕೂ ಕೂಡ ಬಂದಿದೆ. ಈಗಾಗಲೇ ನಮ್ಮ ರಾಜ್ಯದಲ್ಲಿ 19 ತರಬೇತಿ ಕೇಂದ್ರಗಳಿವೆ. ಸುಮಾರು 600 ಜನ ಪ್ರತಿ ವರ್ಷ ತರಬೇತಿಯನ್ನು ಮುಗಿಸಿ ಎ.ಎನ್.ಎಂ. ಆಗಿ ನಮ್ಮ ಇಲಾಖೆಗೆ ಸೇರ್ಪಡೆಯಾಗುತ್ತಿದ್ದಾರೆ. ಇದರ ಜೊತೆಗೆ ಎರಡು ಖಾಸಗಿ ಶಾಲೆಗಳು ಸಹ ನಮ್ಮಲ್ಲಿವೆ. ಈ ಸಾರಿ ಬಂದಂಥ 600 ಎ.ಎನ್.ಎಂ.ಗಳಲ್ಲಿ ಪ್ರಾಥಮಿಕ ಕೇಂದ್ರವಾದಂಥ ವೈ.ಎನ್. ಕೋಟೆಗೆ ಒಬ್ಬರನ್ನು

ನೇಮಕ ಮಾಡುತ್ತಿದ್ದೇವೆ. ಮತ್ತೆ ಮಂಗಳವಾಡ ಕೇಂದ್ರಕ್ಕೆ ಇಬ್ಬರನ್ನು ಹಾಗೂ ಪಾವಗಡಕ್ಕೆ ಒಬ್ಬರನ್ನು ನೇಮಕ ಮಾಡುತ್ತಿದ್ದೇವೆ. ಒಟ್ಟು ನಾಲ್ಕು ಹುದ್ದೆಗಳನ್ನು ನೇಮಕ ಮಾಡುವುದಕ್ಕೆ ನಾನು ಈಗಾಗಲೇ ಕ್ರಮವನ್ನು ಕೈಗೊಂಡು ನೇಮಕಾತಿ ಆದೇಶವನ್ನು ಸಹ ಅವರಿಗೆ ಕೊಟ್ಟಿದ್ದೇನೆ. ನಮ್ಮ ರಾಜ್ಯದಲ್ಲಿ ಮಂಜೂರಾದ ಎ.ಎನ್.ಎಂ. ಹುದ್ದೆಗಳು ಒಟ್ಟು 10,250. ಅದರಲ್ಲಿ ಸುಮಾರು 9188 ಹುದ್ದೆಗಳಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ. 1067 ಹುದ್ದೆಗಳು ಖಾಲಿ ಇವೆ. ನಮ್ಮ ತರಬೇತಿ ಕೇಂದ್ರದಿಂದ ಪ್ರತಿ ವರ್ಷ 600 ಜನ ಬರುತ್ತಿದ್ದಾರೆ. ಆದರೆ, ಇದು ಸಾಕಾಗುತ್ತಿಲ್ಲ. ಆದ್ದರಿಂದ, ಹೊಸದಾಗಿ ಈ ತರಬೇತಿ ಕೇಂದ್ರಗಳನ್ನು ಪ್ರಾರಂಭಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಇದರ ಬಗ್ಗೆ ಆದಷ್ಟು ಶೀಘ್ರವಾಗಿ ಒಂದು ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆ. ಇವತ್ತಿನ ದಿವಸ ಪ್ರತಿ ಒಂದು ಉಪ ಕೇಂದ್ರದಲ್ಲಿ ಒಬ್ಬರು ಎ.ಎನ್.ಎಂ. ಇರುತ್ತಾರೆ. ಆದರೆ, ನಮ್ಮ ಎನ್.ಆರ್.ಹೆಚ್.ಎಂ. ಯೋಜನೆ ಅಡಿಯಲ್ಲಿ, ಆ ಸ್ಥಳದಲ್ಲಿ ಇಬ್ಬರನ್ನು ನೇಮಕ ಮಾಡಬೇಕೆಂದು ಈಗಾಗಲೇ ಕೇಂದ್ರ ಸರ್ಕಾರ ನಮಗೆ ಅನುಮತಿಯನ್ನು ಕೊಟ್ಟಿದೆ. ಆದ್ದರಿಂದ ಮುಂದೆ ಬರತಕ್ಕಂಥ ದಿನಗಳಲ್ಲಿ ಎರಡು ಎ.ಎನ್.ಎಂ. ಹುದ್ದೆಗಳನ್ನು ಸೃಷ್ಟಿ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಈಗ ಅಲ್ಲಿ ಕೊರತೆ ಇರುವುದಕ್ಕೆ ಸದ್ಯಕ್ಕೆ ನಾಲ್ಕು ಹುದ್ದೆಗಳಿಗೆ ನೇಮಕಾತಿ ಮಾಡಿ, ಆ ಸ್ಥಳಗಳಿಗೆ ನಿಯೋಜನೆ ಮಾಡುತ್ತೇವೆ. ಮುಂದೆ ಬರತಕ್ಕಂಥ ದಿನಗಳಲ್ಲಿ ಹೊಸದಾಗಿ ಬರತಕ್ಕಂಥ ಅಭ್ಯರ್ಥಿಗಳನ್ನು ಪಾವಗಡದಲ್ಲಿ ನೇಮಕ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ಈ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ.

**ಅಧ್ಯಕ್ಷರು:** ಮುಂದಿನ ಪ್ರಶ್ನೆ ಮಾನ್ಯ ಹೆಚ್.ಎಸ್. ಶಂಕರಲಿಂಗೇಗೌಡರದು. ಅವರು ಈಗ ಹಾಜರಿಲ್ಲ. ಮಾನ್ಯ ಪ್ರಭಾಕರ ಬಂಗೇರರವರೆ, ತಾವು ತಮ್ಮ ಪ್ರಶ್ನೆ ಕೇಳಿ.

**ಬೆಳ್ತಂಗಡಿ ತಾಲ್ಲೂಕ ವ್ಯಾಪ್ತಿಯಲ್ಲಿರುವ ಆರೋಗ್ಯ ಕೇಂದ್ರಗಳು**

110 (520) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳ್ತಂಗಡಿ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳ ಸಂಖ್ಯೆ ಎಷ್ಟು;